# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 74 ಗ್ರಾಪಂಸಿ 2017(ಭಾಗ-2)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:05-10-2018

**ಇವರಿಂದ:**

ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

**ಇವರಿಗೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು.

ಮಾನ್ಯರೆ,

**ವಿಷಯ:** ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿಯಲ್ಲಿ ದಿನಾಂಕ:31-10-2017 ರಲ್ಲಿದ್ದಂತೆ ಪ್ರಸ್ತುತಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳಲ್ಲಿ ಸರ್ಕಾರದ ನಿಧಿಯಿಂದ ವೇತನ ಪಾವತಿಸಲುಕೈಬಿಟ್ಟಿರುವ ನೌಕರರ ವಿವರ ನೀಡುವ ಬಗ್ಗೆ.

**ಉಲ್ಲೇಖ:**

1. ಸರ್ಕಾರದಆದೇಶ ಸಂಖ್ಯೆ:ಗ್ರಾಅಪ 74 ಗ್ರಾಪಂಸಿ 2017 (ಭಾಗ-1) ದಿನಾಂಕ:02-03-2018.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 74 ಗ್ರಾಪಂಸಿ 2017 (ಭಾಗ-1) ದಿನಾಂಕ:12-03-2018.
3. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 74 ಗ್ರಾಪಂಸಿ 2017 (ಭಾಗ-1) ದಿನಾಂಕ:20-04-2018.
4. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 74 ಗ್ರಾಪಂಸಿ 2017 (ಭಾಗ-1) ದಿನಾಂಕ:14-06-2018.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ಮತ್ತು (2) ರ ಸರ್ಕಾರದ ಆದೇಶ ಮತ್ತು ಸುತ್ತೋಲೆಯಲ್ಲಿ ದಿನಾಂಕ:31-10-2017 ರಲ್ಲಿದ್ದಂತೆ ಪ್ರಸ್ತುತ ರಾಜ್ಯದ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1) ಬಿಲ್‌ಕಲೆಕ್ಟರ್ 2)ಕ್ಲರ್ಕ್, ಕ್ಲರ್ಕ್ ಕಂ ಡಾಟಾಎಂಟ್ರಿಆಪರೇಟರ್, 3) ವಾಟರ್‌ಮೆನ್/ ಪಂಪ್‌ಆಪರೇಟರ್. / ಪಂಪ್ ಮೆಕಾನಿಕ್ 4) ಜವಾನ ಮತ್ತು 5) ಸ್ವಚ್ಛತಾಗಾರ ವೃಂದದ ನೌಕರರಿಗೆ ಸರ್ಕಾರದ ನಿಧಿಯಿಂದ ವೇತನ ಪಾವತಿಸಲು ಆದೇಶಿಸಲಾಗಿದೆ.

ಸದರಿ ಆದೇಶ ಮತ್ತು ಸುತ್ತೋಲೆಗಳಂತೆ ಸೇವಾ ಮಾಹಿತಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿದ ನಂತರ ಉಲ್ಲೇಖ (3)ರ ಆದೇಶದಂತೆ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ ಶಿಫಾರಸ್ಸು ಮಾಡಿದ ನೌಕರರಿಗೆ ಉಲ್ಲೇಖ(4) ರಂತೆ ಮಾರ್ಚ್ 2018ರಿಂದ ಸರ್ಕಾರದ ನಿಧಿಯಿಂದ ವೇತನ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ.

ಉಲ್ಲೇಖ (4)ರ ಆದೇಶದಂತೆ ಹಲವಾರು ನೌಕರರು ನಿರ್ದಿಷ್ಟ ಕಾರಣಗಳಿಗಾಗಿ ಅಂದರೆ ಜನ್ಮ ದಿನಾಂಕ, ಶೈಕ್ಷಣಿಕ ವಿದ್ಯಾರ್ಹತೆ ಹೊಂದಿರದ, ಗ್ರಾಮ ಪಂಚಾಯತಿ ನಿರ್ಣಯದೊಡನೆ ನೇಮಕಗೊಂಡಿರದ, ಹಾಜರಾತಿ ವಹಿ ಹಾಗೂ ಬಟವಾಡೆ ಪುಸ್ತಕದಲ್ಲಿ ಸೇರಿರದ ನೌಕರರುಗಳು ಸರ್ಕಾರದ ವೇತನ ವ್ಯಾಪ್ತಿಯಿಂದ ಹೊರಗೆ ಉಳಿದಿರುತ್ತಾರೆ. ಇವರುಗಳನ್ನು ಗ್ರಾಮ ಪಂಚಾಯತಿಗಳು ಕೆಲಸದಿಂದ ತೆಗೆದು ಹಾಕಬಾರದೆಂದು ಇವರುಗಳಿಗೆ ಗ್ರಾಮ ಪಂಚಾಯತಿ ನಿಧಿಯಿಂದ ನಿಯಮಾನುಸಾರ ವೇತನ ಪಾವತಿಸಬೇಕೆಂದು ತಿಳಿಸಲಾಗಿದೆ.

ಆದಾಗ್ಯೂ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದವರು ಈ ನೌಕರರುಗಳಿಗೂ ಸರ್ಕಾರದ ನಿಧಿಯಿಂದ ವೇತನ ಪಾವತಿಸುವಂತೆ ಸರ್ಕಾರದ ಮುಂದೆ ಬೇಡಿಕೆ ಸಲ್ಲಿಸಿದ್ದು, ಈ ಬಗ್ಗೆ ದಿನಾಂಕ:28-08-2018ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ನೌಕರರ ಸಂಘದ ಪದಾಧಿಕಾರಿಗಳು ಹಾಗೂ ಅಧಿಕಾರಿಗಳ ಜೊತೆ ನಡೆದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದ ಮೇರೆಗೆ, ಸರ್ಕಾರದ ವೇತನಕ್ಕೆ ಒಳಪಡದಿರುವ ದಿನಾಂಕ:31-10-2017 ರಲ್ಲಿದ್ದಂತೆ ಪ್ರಸ್ತುತ ರಾಜ್ಯದ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1) ಬಿಲ್‌ಕಲೆಕ್ಟರ್, 2)ಕ್ಲರ್ಕ್, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, 3) ವಾಟರ್‌ಮೆನ್/ ಪಂಪ್‌ಆಪರೇಟರ್ / ಪಂಪ್ ಮೆಕಾನಿಕ್ 4) ಜವಾನ ಮತ್ತು 5) ಸ್ವಚ್ಛತಾಗಾರ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳಿಗೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ವೇತನ ಪಾವತಿಸಲು ಪರಿಗಣಿಸಲು ಅನುವಾಗುವಂತೆ ಈ ಕೆಳಕಂಡ ಮಾಹಿತಿಯನ್ನು ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ 15 ದಿನಗಳೊಳಗಾಗಿ ಒದಗಿಸಲು ತಿಳಿಸಿದೆ.

1. ನೌಕರರ ನೇಮಕಾತಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯ ನಿರ್ಣಯದ ಪ್ರತಿ.
2. ಗ್ರಾಮ ಪಂಚಾಯತಿ ನೌಕರರ ಹಾಜರಾತಿ ಪುಸ್ತಕ/ ಇ-ಹಾಜರಾತಿ ದಾಖಲೆ.
3. ನೌಕರರ ವೇತನ ಬಟಾವಡೆ ಪುಸ್ತಕದ ದಾಖಲೆ.
4. ನೌಕರರ ಜನ್ಮ ದಿನಾಂಕದ ದಾಖಲೆ.
   (ಲಭ್ಯವಿಲ್ಲದಿದ್ದಲ್ಲಿ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ದೃಢೀಕರಣ ಪಡೆದು ಒದಗಿಸುವುದು).
5. ಶೈಕ್ಷಣಿಕ ವಿದ್ಯಾರ್ಹತೆ ದಾಖಲೆ.
   (ನಿಗಧಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆ ಇಲ್ಲದಿದ್ದಲ್ಲಿ ಹಾಲಿ ಇರುವ ಶೈಕ್ಷಣಿಕ ವಿವರ ನಮೂದಿಸುವುದು)

ಮೇಲ್ಕಂಡ ಮಾಹಿತಿ ಆಧರಿಸಿ ಸರ್ಕಾರದ ವೇತನಕ್ಕೆ ಒಳಪಡದಿರುವ ನೌಕರರುಗಳಿಗೆ ವೇತನಕ್ಕೆ ಒಳಪಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ನಿಗಧಿತ ಅವಧಿಯೊಳಗೆ ತಪ್ಪದೆ ಮಾಹಿತಿ ಒದಗಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದೆ.

ತಮ್ಮ ವಿಶ್ವಾಸಿ,

5.10.18

(ಎಂ.ಕೆ.ಕೆಂಪೇಗೌಡ)
ನಿರ್ದೇಶಕರು (ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:-
1) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
2) ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.
3) ಸಂಪಾದಕರು, ಕರ್ನಾಟಕ ವಿಕಾಸ/ವೆಬ್ ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.
4) ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ:-
1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ
3) ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾ.ಅ. & ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ
4) ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘ(ರಿ), ಬೆಂಗಳೂರು.